Sl. No.	Name of Taluka	Name of the Village	Name of the Scheme	Atchkat (HA)	Water spread area (Hect)
60	Hubli	Chchebbi	Aralikatti keri 190 & 193	131.62	13.56
61	Hubli	Chchebbi	Hirekeri 123	42.12	11.87
62	Hubli	Channapur	Gayanakeri 59	46.75	0.81
63	Hubli	Kamplikoppa	Hirekeri 76	42.52	5.79
64	Hubli	Kuradikeri	Chikkeri 67	74.92	9.96
65	Hubli	Katnur	Govt Tank 111 & 112	81.00	10.03
66	Hubli	Rayanal	New Tank 93,94	60.75	7.87
67	Hubli	Revadihal	New Tank 82 & 83	48.60	12.47
			TOTAL	**680.15**	**87.39**
			GRAND TOTAL	**7,026.53**	**697.31**

2283(2242) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ):- ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಂತೇಮರಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದ ಕೆರೆಗಳ ಸಂಖ್ಯೆ ಎಷ್ಟು;

ಆ) ಇವುಗಳ ಅಭಿವೃದ್ಧಿಗೆ ಸರ್ಕಾರ ಬಿಡುಗಡೆ ಮಾಡಿರುವ ಹಣವೆಷ್ಟು;

ಇ) ಇವುಗಳ ಬಗ್ಗೆ ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):-

ಅ) ಸಣ್ಣ ನೀರಾವರಿ ಇಲಾಖೆಯಲ್ಲಿ 8 ಕೆರೆಗಳು ಇರುತ್ತವೆ.

ಆ) 1.2 ಲಕ್ಷ ರೂ.ಗಳು

ಇ) 1.2 ಲಕ್ಷ ರೂ.ಗಳನ್ನು ಖರ್ಚು ಮಾಡಿ ಸ್ವಲ್ಪ ಮಟ್ಟಿಗೆ ಅಭಿವೃದ್ಧಿಪಡಿಸಲಾಗಿದೆ.

2284(2235) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಕಿರು ನೀರು ಸರಬರಾಜು ಯೋಜನೆಯ ವಿದ್ಯುತ್ ಸರಬರಾಜನ್ನು ಕಡಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ರೀತಿ ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಕಾರಣವೇನು;

ಇ) ಈ ವಿದ್ಯುತ್ ಸಂಪರ್ಕದ ಬಾಬ್ತು ಎಷ್ಟು ಹಣ ಪಾವತಿಸಬೇಕಾಗಿದೆ ಹಾಗೂ ಈ ಹಣವನ್ನು ಯಾವ ಸಂಸ್ಥೆ ಇಲಾಖೆ ಪಾವತಿಸಬೇಕಾಗಿದೆ;

ಈ) ಮುಂಬರುವ ಬೇಸಿಗೆ ಅವಧಿಯಲ್ಲಿ ನೀರಿನ ಬವಣೆಯನ್ನು ತಪ್ಪಿಸಲು ಕಿರು ನೀರು ಸರಬರಾಜು ಯೋಜನೆಯ ವಿದ್ಯುತ್ ಬಿಲ್ಲಿನ ಹಣ ಪಾವತಿಸಲು ಸರ್ಕಾರ ಕ್ರಮ ಕೈಗೊಳ್ಳುವುದು;

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):-

(ಅ,ಆ,ಇ&ಈ) ಬೆಸ್ಕಾಂ ರವರಿಗೆ ವಿದ್ಯುತ್ ಶುಲ್ಕದ ಬಾಕಿ ಪಾವತಿಸದೇ ಇರುವ ಕಾರಣ ಸಂಪರ್ಕಗಳನ್ನು ಕಡಿದುಹಾಕಿರುತ್ತಾರೆ. ಒಟ್ಟಾರೆ 6246 ಕೊಳವೆಬಾವಿಗಳಿದ್ದು, ಅವುಗಳಲ್ಲಿ 2428 ಕಿರು ನೀರು ಸರಬರಾಜುಗಳಾಗಿರುತ್ತದೆ. ವಿದ್ಯುತ್ ಸಂಪರ್ಕದ ಬಾಬ್ತು ಇದುವರೆವಿಗೂ ಸುಮಾರು 7 ಕೋಟಿ ರೂ. ಹಣವನ್ನು ವಿದ್ಯುತ್ ಇಲಾಖೆಗೆ ಪಾವತಿಸಬೇಕಾಗಿರುತ್ತದೆ. ಬೆಂಗಳೂರು ಜಲಮಂಡಲಿಯ ನೀತಿಯ ಪ್ರಕಾರ ಬೀದಿ ಕೊಳಾಯಿಗಳನ್ನು ಕಾವೇರಿ ನೀರು ಸರಬರಾಜು ಜಲ ಇರುವ ಪ್ರದೇಶಗಳಲ್ಲಿ ಉತ್ತೇಜಿಸುವುದಿಲ್ಲ. ಸಾರ್ವಜನಿಕರು ವೈಯಕ್ತಿಕ ನೀರಿನ ಸಂಪರ್ಕಗಳನ್ನು ಪಡೆದುಕೊಳ್ಳಲು ಉತ್ತೇಜಿಸಲಾಗಿದೆ ಹಾಗೂ ಅಂತಹ ಪ್ರದೇಶಗಳಲ್ಲಿ ಬೀದಿ ಕೊಳಾಯಿಗಳ ಮೇಲೆ ಅವಲಂಬಿಸದೆ ಇರುವಂತೆ ಯೋಜಿಸಿದೆ. ನೀರಿನ ಅಭಾವ ಕಂಡುಬಂದಿರುವ ಕಡೆ ಎಲ್ಲಾ ಕೊಳವೆಬಾವಿಗಳ ವಿದ್ಯುತ್ ಬಿಲ್ಲನ್ನು ಬೆಂಗಳೂರು ಜಲಮಂಡಲಿಯು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

2285(3092) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ 2003-04ನೇ ಸಾಲಿನಲ್ಲಿ ವೆಚ್ಚ ಮಾಡಿರುವ ಒಟ್ಟು ಹಣ ಎಷ್ಟು;

ಆ) ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣ ವೆಚ್ಚವನ್ನು ಮಾಡಲಾಗಿದೆ.

ಇ) ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾದ ವಿಶೇಷ ಯೋಜನೆಗಳು ಅಥವಾ ಕಾರ್ಯಕ್ರಮಗಳು ಯಾವುವಷ್ಟು;

ಈ) ಎಲ್ಲೆಲ್ಲಿ ಹಮ್ಮಿಕೊಳ್ಳಲಾಗಿದೆ;

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು):-

ಅ) 2003-04ನೆಯ ಸಾಲಿನಲ್ಲಿ ವೆಚ್ಚವಾಗಿರುವ ಒಟ್ಟು ಮೊತ್ತ.

1)	ಯೋಜನೆ	472.79 ಲಕ್ಷಗಳು ರೂ.
2)	ಯೋಜನೇತರ	1523.30 ಲಕ್ಷಗಳು ರೂ.
	ಒಟ್ಟು	**1996.09 ಲಕ್ಷ ರೂ.ಗಳು**

ಆ) ಜಿಲ್ಲಾವಾರು ಸಾಂಸ್ಕೃತಿ ಕಾರ್ಯಕ್ರಮಗಳಿಗೆ ಧನಸಹಾಯ ಹಾಗೂ ವೇತನ ಭತ್ಯೆಗಳಿಗೆ ಸೇರಿ ವೆಚ್ಚ ಮಾಡಲಾಗಿರುವ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.